ಬೆಲೆ ರೂ.2.50
D.O.P - 15th of every month at Udupi Sorting Office

ತಂತ್ರಾಡಿ ವಿಶ್ವನಾಥ ಶಾನುಭೋಗ್

☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಮಾರ್ಚ್ 2017

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-17 ಸಂಚಿಕೆ-3 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶ್ರೀ ಶಾರದಾ ಮಂಟಪದಲ್ಲಿ ಮಹಾಶಿವರಾತ್ರಿ




ತಾ.24-02-2017ನೇ ಶುಕ್ರವಾರದಂದು ಮಹಾಶಿವರಾತ್ರಿಯನ್ನು ಭಕ್ತಿಭಾವದಿಂದ ಶ್ರೀ ಶಾರದಾ ಮಂಟಪದಲ್ಲಿ ಆಚರಿಸಲಾಯಿತು. ಅಂದು ಬೆಳಿಗ್ಗೆ ಬ್ರಹ್ಮಶ್ರೀ ಸುಬ್ರಹ್ಮಣ್ಯ ಉಪಾಧ್ಯಾಯರ ನೇತೃತ್ವದಲ್ಲಿ ಪ್ರಾರ್ಥನೆಯಾದ ನಂತರ ಗಣಹೋಮ, ರುದ್ರಾಭಿಷೇಕ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು. ನಂತರ ಸ್ವಾಧ್ಯಾಯ ತಂಡದವರು ಸಾಮೂಹಿಕವಾಗಿ ರುದ್ರ ಪಾರಾಯಣ ಹಾಗೂ ಶಿವಸಹಸ್ರನಾಮ ಪಾರಾಯಣವನ್ನು ಮಾಡಿದರು. ಈ ಕಾರ್ಯಕ್ರಮದ ನಂತರ ಹತ್ತು ಗಂಟೆಗೆ ಸರಿಯಾಗಿ ಮಹಿಳಾವೇದಿಕೆಯ ವತಿಯಿಂದ ಶ್ರೀ ಶಾರದಾಮಂಟಪದಲ್ಲಿ ಶಿವನನ್ನು ಕೀರ್ತಿಸುವ ಭಜನಾ ಕಾರ್ಯಕ್ರಮವು ವಿಶೇಷವಾಗಿ ನೆರವೇರಿತು. ಈ ಭಜನಾ ಕಾರ್ಯಕ್ರಮದಲ್ಲಿ ಪಡುಬಿದ್ರೆಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಮಹಿಳಾ ವೇದಿಕೆಯ ಭಜನಾತಂಡ ಹಾಗೂ ಉಡುಪಿ ಶ್ರೀ ಶಾರದಾ ಮಂಟಪದ ಮಹಿಳಾವೇದಿಕೆಯ ಭಜನಾ ತಂಡಗಳು ಭಾಗವಹಿಸಿದ್ದವು. ಸುಮಾರು ಮೂರು ಗಂಟೆಗಳ ಕಾಲ ನಡೆದ ಈ ಭಜನಾ ಕಾರ್ಯಕ್ರಮದಲ್ಲಿ ಮಹಿಳೆಯರು ಶಿವನನ್ನು ಸ್ತುತಿಸುವ ಅನೇಕ ಭಕ್ತಿಗೀತೆಗಳನ್ನು ಹಾಡಿದರು. ಶ್ರೀ ಗೌತಮ್‌ರವರು ತಬಲಾದಲ್ಲಿ ಸಾಥ್ ನೀಡಿದರು. ನಂತರ ಶ್ರೀ ಮನೋಹರ್ ಹಾಗೂ ಸುನೀತ ದಂಪತಿಗಳ ಪುತ್ರ ರಾಜ್ಯಪ್ರಶಸ್ತಿ ವಿಜೇತ ಚಿ। ಸಾಗರ್ ಪಿ. ಇವನು ಮೂರು ಭಕ್ತಿಗೀತೆಗಳನ್ನು ಹಾಡಿ ಕೇಳುಗರ ಮನ ಸೂರೆಗೊಂಡನು. ಶ್ರೀ ವೈ.ಭುವನೇಂದ್ರ ರಾಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡವರನ್ನು ಶಾಲು ಹೊದಿಸಿ ಸ್ವಾಗತಿಸಿದರು ಹಾಗೂ ಕಾರ್ಯಕ್ರಮವು ಯಶಸ್ವಿಯಾಗಲು ಸಹಕರಿಸಿದ ಎಲ್ಲಾ ಸಮಾಜಬಾಂಧವರಿಗೆ, ಭಕ್ತರಿಗೆ ಧನ್ಯವಾದವನ್ನಿತ್ತರು. ಭಜನೆಯ ನಂತರ ಮಧ್ಯಾಹ್ನ ಸುಮಾರು 12-30ಕ್ಕೆ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಪೂಜೆಯಾಯಿತು. ಮಹಾಪೂಜೆಯ ನಂತರ ಫಲಾಹಾರ ಪ್ರಸಾದದೊಂದಿಗೆ ಶಿವರಾತ್ರಿಯ ಕಾರ್ಯಕ್ರಮಗಳು ಮುಕ್ತಾಯಗೊಂಡವು.

## ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲಕ್ಕೆ ನೂತನ ಆಡಳಿತ ಮಂಡಳಿ


ಎನ್.ಕೆ. ಜಗನ್ನಿವಾಸ ರಾವ್


ಎಂ. ದೇವಾನಂದ ಭಟ್

ಸ್ಥಾನಿಕ ಬ್ರಾಹ್ಮಣರ ವಿವಿಧ ಸಂಘಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳ ಅಂತರಾಷ್ಟ್ರೀಯ ಮಟ್ಟದ ಒಕ್ಕೂಟವಾದ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ನೂತನ ಆಡಳಿತ ಮಂಡಳಿಯ ಆಯ್ಕೆ ತಾ.26-2-2017ರಂದು ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ ನೆರವೇರಿತು. ಒಕ್ಕೂಟದ ಅಧ್ಯಕ್ಷರಾಗಿದ್ದ ಶ್ರೀ ಎಂ.ಆರ್. ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಸಭೆ ಆರಂಭವಾಯಿತು. ಕಾರ್ಯದರ್ಶಿಗಳಾದ ಶ್ರೀ ಎನ್.ಕೆ. ಜಗನ್ನಿವಾಸರಾಯರು ವರದಿಯನ್ನೂ, ಕೋಶಾಧಿಕಾರಿ ಶ್ರೀ ಜಿ.ಕೆ.ಕೋಲ್ಪೆ ಲೆಕ್ಕಪತ್ರಗಳನ್ನೂ ಮಂಡಿಸಿ ಸಭೆಯ ಅಂಗೀಕಾರ ಪಡೆದುಕೊಂಡರು. ನಂತರ ಸಭೆಯ ಅಧ್ಯಕ್ಷರು ಕಾಸರಗೋಡು ಸಂಘದ ಅಧ್ಯಕ್ಷರಾದ ಶ್ರೀ ಸುಕುಮಾರ ಆಲಂಪಾಡಿಯವರನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸಿದರು. ಸುದೀರ್ಘ ಚರ್ಚೆಯ ನಂತರ ಶ್ರೀ ಎನ್.ಕೆ ಜಗನ್ನಿವಾಸ ರಾಯರನ್ನು ನೂತನ ಅಧ್ಯಕ್ಷರನ್ನಾಗಿಯೂ, ಶ್ರೀ ಜಿ.ಕೆ. ಕೋಲ್ಪೆಯವರನ್ನು ಉಪಾಧ್ಯಕ್ಷರನ್ನಾಗಿಯೂ, ಬೆಳುವಾಯಿಯ ಶ್ರೀ ಎಂ.ದೇವಾನಂದ ಭಟ್ ಇವರನ್ನು ಕಾರ್ಯದರ್ಶಿಯನ್ನಾಗಿಯೂ, ಬೆಳ್ತಂಗಡಿಯ ಶ್ರೀ ಧನಂಜಯ ಕುಮಾರ್ ಮತ್ತು ನಂದಿಕೂರಿನ ಶ್ರೀ ಎಸ್.ಜನಾರ್ಧನ ರಾವ್ ಇವರನ್ನು ಜೊತೆಕಾರ್ಯದರ್ಶಿಗಳಾಗಿ ಹಾಗೂ ಕೋಶಾಧಿಕಾರಿಯಾಗಿ ಮಂಗಳೂರಿನ ಉದಯ್ ಕುಮಾರ್‌ರವರನ್ನು ಆಯ್ಕೆ ಮಾಡಲಾಯಿತು. ಶ್ರೀ ಎಂ.ಆರ್. ವಾಸುದೇವ ರಾಯರು ನೂತನ ಪದಾಧಿಕಾರಿಗಳಿಗೆ ಯಶಸ್ಸನ್ನು ಕೋರಿ ಧನ್ಯವಾದವನ್ನಿತ್ತರು. ನಂತರ ಒಕ್ಕೂಟದ ಚಟುವಟಿಕೆಗಳ ರೂಪುರೇಷೆಗಳ ಬಗ್ಗೆ ಕಿರುಚರ್ಚೆಯೊಂದಿಗೆ ಸಭೆಯು ಮುಕ್ತಾಯವಾಯಿತು.

## ಕೊಡಚಾದ್ರಿಗೆ ಪ್ರವಾಸ



ವಿವರ 3ನೇ ಪುಟದಲ್ಲಿ...

## ಶ್ರೀಶಾರದಾ ದೇವಸ್ಥಾನ

ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576102.



ಪ್ರಿಯರೇ,

ಸ್ವಸ್ತಿ ಶ್ರೀ ಹೇಮಲಂಬಿ ನಾಮ ಸಂ।ರದ ಚೈತ್ರ ಶುಕ್ಲ 1ಯು **ತಾ.29-03-2017ನೇ ಬುಧವಾರದಿಂದ** ಚೈತ್ರ ಶುಕ್ಲ 9ಯು **ತಾ.05-04-2017ನೇ ಬುಧವಾರದ ತನಕ**

**ಕಿರುನವರಾತ್ರಿ ಉತ್ಸವವು** ಜರಗಲಿರುವುದು.

ಈ ಪ್ರಯುಕ್ತ ಪ್ರತಿದಿನ ಸಂಜೆ ದೇವಿಗೆ ವಿಶೇಷ ಪೂಜೆ ನೆರವೇರಲಿದೆ.

**ತಾ.05-04-2017ನೇ ಬುಧವಾರ** ಸಂಜೆ ಗಂಟೆ 5-00ರಿಂದ

**ಸಾಮೂಹಿಕ ಶ್ರೀದುರ್ಗಾನಮಸ್ಕಾರ ಪೂಜೆಯು**

ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಸೇವಾ ರೂಪದಲ್ಲಿ ಪೂಜೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಅಪರಾಹ್ನ 3ರಿಂದ ದೀಪವಿಟ್ಟು ಮಂಡಲ ರಚನೆ, ಸಂಜೆ 5 ರಿಂದ ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತಿ ಪಾರಾಯಣ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ ವಿಧಿಗಳು ನಡೆಯಲಿವೆ. **ಸೇವಾ ಶುಲ್ಕ ರೂ.150/-**

**– ಆಡಳಿತ ಮಂಡಳಿ**

# ಸಂಪಾದಕೀಯ.....

**- ಡಾ| ವೈ. ಸುದರ್ಶನ್ ರಾವ್**

**(ಅಂತರ್ಜಾತೀಯ ವಿವಾಹದ ಬಗ್ಗೆ ಚರ್ಚೆಯ ಮುಂದುವರಿದ ಭಾಗ)**

ಅಂತರ್ಜಾತೀಯ ವಿವಾಹದ ಬಗೆಗಿನ ಚರ್ಚೆಯು ಕೊನೆಯ ಅಂಕಣಕ್ಕೆ ಕಾಲಿಡುತ್ತಿದ್ದೇವೆ. ಅಂತರ್ಜಾತೀಯ ವಿವಾಹ ಸರಿಯೋ ಅಥವಾ ತಪ್ಪೋ ಎಂಬುದು ಈ ಚರ್ಚೆಯ ಉದ್ದೇಶವಲ್ಲ. ಜಾತಿಯ ಹೆಸರಿನಲ್ಲಿ ನಡೆಯುತ್ತಿರುವ ನಮ್ಮ ಸಂಘಟನೆಯ ಮೇಲೆ ಅಂತರ್ಜಾತೀಯ ವಿವಾಹಗಳಿಂದುಂಟಾಗುವ ಪರಿಣಾಮಗಳೇನು ಹಾಗೂ ಅದರಿಂದ ದುಷ್ಪರಿಣಾಮಗಳೇನಾದರೂ ಸಂಘಟನೆಯ ಮೇಲೆ ಆಗುವುದಿದ್ದರೆ ಅದರ ನಿವಾರಣೋಪಾಯಗಳೇನು ಎಂಬುದಕ್ಕಷ್ಟೇ ಈ ಚರ್ಚೆ ಸೀಮಿತವಾಗಿದೆ. ಈ ತನಕ ನಡೆದ ಅಂತರ್ಜಾತೀಯ ವಿವಾಹಗಳಿಂದಾಗ ಬಹುದಾದ ಒಳಿತು ಕೆಡುಕುಗಳ ವಿಶ್ಲೇಷಣೆಯಲ್ಲಿ ಮುಂದೊಂದು ದಿನ ಅಂತರ್ಜಾತೀಯ ವಿವಾಹವೇ ಮೇಲುಗೈ ಸಾಧಿಸಲಿಕ್ಕಿದೆಯೆಂದು ನನಗನ್ನಿಸುತ್ತದೆ. ಈ ಮೇಲುಗೈ ಸಾಧಿಸಲು ಅಂತರ್ಜಾತೀಯ ವಿವಾಹಗಳಲ್ಲಿ ಅನುರೂಪ ಸಂಗಾತಿಯ ಆಯ್ಕೆಗೆ ಹೆಚ್ಚು ಅವಕಾಶಗಳಿರುವುದು ಮತ್ತು ಈಗಿನ ಯುವಕ ಯುವತಿಯರು ಸ್ವತಃ ತಮ್ಮ ಸಂಗಾತಿಯನ್ನು ಆಯ್ಕೆ ಮಾಡುತ್ತಿರುವುದು ಎರಡು ಅತೀ ಮುಖ್ಯ ಕಾರಣಗಳಾಗಿವೆ. ಅದರ ಋಣಾತ್ಮಕ ಅಂಶಗಳಾದ ಧಾರ್ಮಿಕ ಆಚರಣೆಯಲ್ಲಿ ದ್ವಂದ್ವ ಅಥವಾ ಆಚರಣೆಯಲ್ಲಿರುವ ಭೇದಗಳಿಗೆ ಯಾರೂ ಮಹತ್ವವಿತ್ತಂತಿಲ್ಲ

ವಿಷಯ ಹಾಗಿರುತ್ತ ಭವಿಷ್ಯವು ಗೋಡೆಯ ಮೇಲಿನ ಬರಹದಂತೆ ನಿಚ್ಚಳವಾಗಿರುವಾಗ ನಮ್ಮ ಸ್ಥಾನಿಕ ಬ್ರಾಹ್ಮಣ ಸಮಾಜವನ್ನು ಉಳಿಸಿಕೊಳ್ಳುವುದಾದರೆ ನಾವೇನು ಮಾಡಬಹುದು ಎಂಬ ಪ್ರಶ್ನೆಗೆ ಉತ್ತರ ಹೀಗಿದೆ

1) **ಸ್ವೀಕಾರ**– ಈಗ ವಿವಾಹವಾಗಿ ಸಮಾಜದೊಳಗೆ ಬಂದಿರುವ ನಮ್ಮ ಮಕ್ಕಳ ಸಂಗಾತಿಗಳನ್ನು(ಅಳಿಯನಾಗಲಿ ಅಥವಾ ಸೊಸೆಯಾಗಲಿ) ನಮ್ಮವರೇ ಎಂದು ಮುಕ್ತಮನಸ್ಸಿನಿಂದ ಯಾವುದೇ ಬೇಧಭಾವವಿಲ್ಲದೇ ಸ್ವೀಕರಿಸಬೇಕು. ಅವರನ್ನು ನಮ್ಮ ಸಮಾಜದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮದಲ್ಲಿ ಕರೆತಂದು ಸಮಾಜಬಾಂಧವರಿಗೆ ಪರಿಚಯಿಸಿ ಅವರ ಹಿಂಜರಿಕೆ/ನಾಚಿಕೆಗಳನ್ನು ಹೋಗಲಾಡಿಸಿ ಸಮಾಜದ ಮುಖ್ಯವಾಹಿನಿಯಲ್ಲಿ ತರುವ ಜವಾಬ್ದಾರಿಯನ್ನು ನಮ್ಮ ಸಮಾಜದ ಹೆತ್ತವರು ಹೊತ್ತು ಆದಷ್ಟು ಬೇಗನೇ ಈ ಕೆಲಸವನ್ನು ಮಾಡಬೇಕು. ವಿವಾಹವಾದ ತಕ್ಷಣ ಹಾಗೂ ವರ್ಷಕೊಮ್ಮೆಯಾದರೂ ದಂಪತಿಗಳನ್ನು ಕುಟುಂಬ ಸಹಿತ ಶೃಂಗೇರಿಗೆ ಕರೆದುಕೊಂಡು ಹೋಗಿ ಜಗದ್ಗುರುಗಳನ್ನು ಭೇಟಿಯಾಗಿ ಅವರ ಆಶೀರ್ವಾದ ಕೊಡಿಸಬೇಕು. ಸಮಾಜಬಾಂಧವರು ಚಾತುರ್ಮಾಸದ ಸಮಯದಲ್ಲಿ ಜಗದ್ಗುರುಗಳನ್ನು ಭೇಟಿಯಾಗುವಾಗ ಸಮಾಜಬಾಂಧವರೊಡನೆ ಈ ನವದಂಪತಿಗಳನ್ನೂ ಕರೆದುಕೊಂಡು ಹೋಗಿ ಅವರಿಗೆ ಶೃಂಗೇರಿ ಜಗದ್ಗುರುಗಳ ಸಂಪರ್ಕ ಕೊಡಿಸಬೇಕು.

2) **ನಮ್ಮತನದ ಉದ್ದೀಪನೆ**– ಸ್ಥಾನಿಕ ಬ್ರಾಹ್ಮಣರಿಗೂ ಕರಾವಳಿಯ ಇತರ ಬ್ರಾಹ್ಮಣರಿಗೂ ವ್ಯತ್ಯಾಸವಿರುವುದು ನಾವು ಶ್ರೀ ಶೃಂಗೇರಿ ಮಠದ ಶಿಷ್ಯರೆಂಬ ಸಂಬಂಧದ ಎಳೆಯೊಂದರಲ್ಲಿ. ಈ ಸಂಬಂಧದ ಎಳೆಯನ್ನು ಉಳಿಸಿಕೊಳ್ಳುವುದೆಂದರೆ ನಮ್ಮತನವನ್ನು ಉಳಿಸಿಕೊಂಡಂತೆ. ಆದುದರಿಂದ ನಮ್ಮ ಸಂಘಟನೆಗಳು ಶೃಂಗೇರಿ ಶ್ರೀ ಶ್ರೀಗಳು ನಾವಿರುವಲ್ಲಿಗೆ ಭೇಟಿ ಕೊಟ್ಟಾಗವಾಗಲಿ ಅಥವಾ ನಾವು ಶ್ರೀ ಶ್ರೀಗಳಲ್ಲಿದ್ದಲ್ಲಿ ತೆರಳುವಾಗವಾಗಲಿ ಅದಕ್ಕೆ ಉತ್ತಮ ಪ್ರಚಾರಕೊಟ್ಟು ಪ್ರತೀ ಮನೆಯಲ್ಲೂ ನಾವು ಶೃಂಗೇರಿ ಮಠದ ಶಿಷ್ಯರು ಎನ್ನುವ ಭಾವನೆಯನ್ನು ಜಾಗೃತಗೊಳಿಸಬೇಕು

3) **ಸ್ವಜಾತಿಯಲ್ಲಿ ಅನುರೂಪ ಸಂಗಾತಿಯನ್ನು ಹುಡುಕಿಕೊಡುವುದು**– ಹೆಚ್ಚಿನ ಅಂತರ್ಜಾತೀಯ ವಿವಾಹಗಳು ಸ್ವಜಾತಿಯಲ್ಲಿ ಅನುರೂಪ ಸಂಗಾತಿ ದೊರಕುತ್ತಿಲ್ಲ ಎಂಬ ಕಾರಣಕ್ಕೆ ನಡೆಯುತ್ತಿರುವುದಾದರೆ ನಮ್ಮ ಸಂಘಟನೆಗಳು ಅತ್ಯಂತ ತುರ್ತಾಗಿ ನಮ್ಮ ಸಮಾಜಕ್ಕೆ ಮೀಸಲಾದ ಬ್ರಹತ್ ವೈವಾಹಿಕ ಅಂಕಣವನ್ನು (ವೆಬ್ ಸೈಟ್)ಅಂತರ್ಜಾಲದಲ್ಲಿ ಸ್ಥಾಪಿಸಿ ನಮ್ಮ ಸಮಾಜದೊಳಗೆ ಉತ್ತಮ ಪ್ರಚಾರ ನೀಡಿ ದೇಶ ವಿದೇಶಗಳಲ್ಲಿ ನೆಲೆಸಿರುವ ನಮ್ಮ ಸಮಾಜದ ಪ್ರತಿಯೊಬ್ಬ ವಿವಾಹ ಯೋಗ್ಯ ಯುವಕಯುವತಿಯರ ವಿವರ ಈ ಅಂಕಣದಲ್ಲಿ ನೊಂದಾವಣೆಯಾಗಿರುವಂತೆ ಮಾಡುವುದೇ ಇದಕ್ಕೆ ಸರಿಯಾದ ಔಷಧವಾಗಿದೆ. ಈ ವೆಬ್‌ಸೈಟ್‌ನ ಉಪಯೋಗ ನಮ್ಮ ಸಮಾಜಬಾಂಧವರಿಗೆ ಮಾತ್ರ ದೊರಕುವಂತೆ ನಿರ್ಬಂಧಿಸುವುದು ಹಾಗೂ ಸಮಾಜದ ಪ್ರತಿಯೊಬ್ಬ ವಿವಾಹಯೋಗ್ಯ ವಧೂವರರ ನೊಂದಾವಣೆ ಎಂಬ ಎರಡು ಅಂಶಗಳನ್ನು ಪಾಲಿಸಿದರೆ ಮಾತ್ರಾ ಈ ಉಪಾಯ ಯಶಸ್ವಿಯಾಗುತ್ತದೆ

4) **ಪ್ರೇಮವಿವಾಹಗಳು ನಡೆಯುವುದಾದರೆ ಸ್ವಜಾತಿಯೊಳಗೆ ನಡೆಯಲಿ**– ನಮ್ಮ ಸಮಾಜದ ಯುವಕ ಯುವತಿಯರಿಗೆ ನಮ್ಮ ಸಮಾಜದ ಯುವಕ ಯುವತಿಯರೇ ಗೆಳೆಯರಾದರೆ ಆಗ ಪ್ರೇಮವಿವಾಹಗಳು ನಡೆಯುವುದಾದರೆ ಸ್ವಜಾತಿಯೊಳಗೆ ನಡೆಯುತ್ತದಲ್ಲವೇ! ಈ ತರ್ಕದ ಪ್ರಕಾರ ನಮ್ಮ ಸಮಾಜದ ಯುವಕ ಯುವತಿಯರ ನಡುವೆ ಪರಸ್ಪರ ಸಂಪರ್ಕ ಹಾಗೂ ಗೆಳೆತನ ಸಾಧಿಸಲು ಈಗಿನ ಯುವಕರ ಮನೋಭಾವನೆಗೆ ಹೊಂದುವಂತಹಾ ಹಾಗೂ ಅವರನ್ನು ಆಕರ್ಷಿಸುವಂತಹಾ ಕಾರ್ಯಕ್ರಮಗಳನ್ನು ಆಯೋಜಿಸುವುದು. ಉದಾ: ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಪ್ರವಾಸ, ಫೇಸ್‌ಬುಕ್ ಮತ್ತು ವಾಟ್ಸಾಪ್ ಗ್ರೂಪ್‌ಗಳು (ಅವರವರ ವೃತ್ತಿ ಮತ್ತು ಹವ್ಯಾಸಗಳ), ಯುವ ಸಮ್ಮೇಳನ ಇತ್ಯಾದಿ

5) **ನಮ್ಮ ನೀತಿಗಳ ಮರುಪರಿಶೀಲನೆ**– ಉದಾಹರಣೆಗೆ ನಮ್ಮ ಕೆಲವು ಸಂಘಟನೆಗಳು ಬಹುಮತಸ್ಥರನ್ನೊಳಗೊಂಡ ವೈವಾಹಿಕ ಅಂಕಣಗಳನ್ನು ನಡೆಸುತ್ತಿವೆ. ಒಂದು ಕಡೆಯಲ್ಲಿ ಅಂತರ್ಜಾತಿಯ ವಿವಾಹಗಳಿಂದ ಮುಂದೆ ನಮ್ಮ ಸಂಘಟನೆಗೆ ಹಾನಿಯಾಗುತ್ತದೆಯೆಂದು ಭಾವಿಸುವುದಾದರೆ ಈ ರೀತಿ ಬಹುಮತಸ್ಥ ಅಂಕಣಗಳನ್ನು ನಡೆಸುವುದರಿಂದ ನಾವೇ ಅಂತರ್ಜಾತಿಯ ವಿವಾಹಕ್ಕೆ ಪ್ರೋತ್ಸಾಹ ನೀಡಿದಂತಾಗುವುದಿಲ್ಲವೇ? ಅದೇ ರೀತಿ ಸಭಾಗೃಹದ ಬಾಡಿಗೆಯಲ್ಲಿ ರಿಯಾಯಿತಿ, ವಿಪ್ರ ಸಂಘಟನೆಗಳಲ್ಲಿ ಭಾಗಿಯಾಗುವುದು ಇತ್ಯಾದಿ ಸಂದರ್ಭಗಳಲ್ಲಿ ನಮ್ಮ ನೀತಿಗಳನ್ನು ನಮ್ಮ ಸಂಘಟನೆಯ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಲ್ಲಿ ಮರುಪರಿಶೀಲಿಸಬಹುದು ಅಥವಾ ರೂಪಿಸಿಕೊಳ್ಳಬಹುದು.

6) **ಶೃಂಗೇರಿ ಮಠದ ಶಿಷ್ಯರ ವೈವಾಹಿಕ ಅಂಕಣದ ಸ್ಥಾಪನೆ**– ಅನುರೂಪ ಸಂಗಾತಿ ನಮ್ಮ ಸಮಾಜದೊಳಗೆ ಸಿಗದೇ ಇದ್ದ ಸಂದರ್ಭದಲ್ಲಿ ಅಂತರ್ಜಾತೀಯ ವಿವಾಹವಾಗುವುದು ಅನಿವಾರ್ಯ ತಾನೆ? ಇಂತಹಾ ಸಂದರ್ಭಗಳಿಗಾಗಿ ಶೃಂಗೇರಿ ಮಠದ ಶಿಷ್ಯರನ್ನೊಳಗೊಂಡಿರುವ ವೈವಾಹಿಕ ಅಂಕಣವನ್ನು ಸ್ಥಾಪಿಸುವ ಸಲಹೆ ಒಂದು ಉತ್ತಮ ಸಲಹೆಯೆನ್ನಿಸುತ್ತದೆ. ಇದರಿಂದ ನಮಗೆ ಅಂತರ್ಜಾತೀಯ ವಿವಾಹವಾದಾಗ್ಯೂ ಮಠದ ಸಂಬಂಧದ ಎಳೆ ಮುಂದುವರಿಯುತ್ತದೆನ್ನುವ ಸಮಾಧಾನ ಹಾಗೆಯೇ ಮಠಕ್ಕೂ ಶಿಷ್ಯರೊಳಗೆ ಸಂಬಂಧ ಕೂಡಿಸಿಕೊಡುವ ಅವಕಾಶ– ಹೀಗೆ ಎರಡೂ ರೀತಿಯಲ್ಲಿಯೂ ಸಮಾಧಾನಕರ ಸಲಹೆಯಿದು. ಶ್ರೀ ಶೃಂಗೇರಿ ಮಠವೇ ಈ ಅಂಕಣವನ್ನು ನಡೆಸಿದರೆ ಅದು ಶ್ರೀಮಠದ ಸಮಸ್ತ ಶಿಷ್ಯವರ್ಗದವರನ್ನು ಒಂದುಗೂಡಿಸುವಂತಹಾ ಕ್ರಾಂತಿಕಾರೀ ಹೆಜ್ಜೆಯಾಗುತ್ತದೆಂಬುದು ನನ್ನ ಭಾವನೆ.

ಚರ್ಚಾರೂಪದಲ್ಲಿ ಈ ಲೇಖನಗಳು ಶ್ರೀ ಶಾರದಾಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದಂತೆ ಎಲ್ಲಾ ವಯೋಮಾನದ ಅನೇಕ ಸಮಾಜಬಾಂಧವರು ಪ್ರತಿಕ್ರಿಯಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯಗಳು ಈ ಲೇಖನಮಾಲೆಯಲ್ಲಿ ಸಮರ್ಪಕವಾಗಿ ಮೂಡಿಬಂದಿವೆಯೆಂದು ಭಾವಿಸುತ್ತೇನೆ. ಸಹಕಾರವಿತ್ತವರೆಲ್ಲರಿಗೂ ಧನ್ಯವಾದಗಳನ್ನರ್ಪಿಸುತ್ತಾ ಇದನ್ನು ಮುಕ್ತಾಯಗೊಳಿಸುತ್ತಿದ್ದೇನೆ.


**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.
-ಸಂಪಾದಕ ಮಂಡಳಿ

**ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-19**

## ಬಟ್ರಪಾಡಿ ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಕುಡಿಪಾಡಿ, ಪುತ್ತೂರು





ಪುತ್ತೂರಿನ ಪಶ್ಚಿಮಕ್ಕೆ ಸುಮಾರು 7 ಕಿ.ಮೀ ಸಾಗಿದಾಗ ಹಸಿರಿಂದ ಕಂಗೊಳಿಸುವ ಪುಟ್ಟ ಗ್ರಾಮವೇ ಕುಡಿಪಾಡಿ, ಈ ಗ್ರಾಮದಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜದ ಪೌರೋಹಿತ್ಯ ಪರಂಪರೆಯ ಬಟ್ರಪಾಡಿ ರಾಮಕೃಷ್ಣ ಭಟ್ ವಂಶಸ್ಥರಿಂದ ಆಡಳಿತ ಹಾಗೂ ಪೂಜೆ ನಡೆಸಲ್ಪಡುವ ದೇವಳವೇ ಶ್ರೀ ಬಟ್ರಪಾಡಿ ವಿಷ್ಣುಮೂರ್ತಿ ದೇವಸ್ಥಾನ.

ಮೂಲತಃ ಮುಳಿಹುಲ್ಲಿನ ಚಾವಣಿಯಿಂದ ಕೂಡಿದ್ದ ಹಾಗೂ ಅತ್ಯಂತ ಶಿಥಿಲವಾಗಿದ್ದ ಈ ದೇವಳವನ್ನು ಆಡಳಿತ ಮೋಕ್ತೇಸರ ಶ್ರೀ.ಬಿ.ರಾಧಾಕೃಷ್ಣ ಭಟ್ ಅವರ ನೇತೃತ್ವದಲ್ಲಿ ಹಾಗೂ ಅವರ ಪುತ್ರರಾದ ಶ್ರೀ ಬಿ.ರಾಧಾಕೃಷ್ಣ ಭಟ್ ಇವರು ಕಾರ್ಯದರ್ಶಿ ಹಾಗೂ ಕೋಶಾಧಿಕಾರಿಯಾಗಿವುಳ್ಳ ಸಮಿತಿಯೊಂದರ ಮತ್ತು ಊರ, ಪರವೂರ ಹಾಗೂ ಸ್ವಜಾತಿ ಭಕ್ತ ಮಹಾಶಯರ ಸಹಕಾರದಿಂದ ಸುಮಾರು 30ವರ್ಷಗಳ ಹಿಂದೆ ಜೀರ್ಣೋದ್ಧಾರ ಕಾರ್ಯವನ್ನು ಪೂರೈಸಿ, ಬ್ರಹ್ಮ ಕಲಶೋತ್ಸವವನ್ನು ಜರಗಿಸಲಾಗಿತ್ತು. ಪ್ರಕೃತ ದೈನಂದಿನ ನಿತ್ಯವಿನಿಯೋಗ ಹಾಗೂ ಪೂಜಾ ಕಾರ್ಯಗಳನ್ನು ನೆರವೇರಿಸುವರೇ ಬೇರೆ ಯಾವುದೇ ಆದಾಯವಿಲ್ಲದಿರುವುದರಿಂದ ನಿತ್ಯವಿನಿಯೋಗ ನಿಧಿಯೊಂದನ್ನು ಸ್ಥಾಪಿಸಿ, ಬಟ್ರಪಾಡಿ ಮನೆಯವರ ನೇತೃತ್ವದಲ್ಲಿಯೇ ಪೂಜಾ ಕಾರ್ಯಗಳು ನಡೆಯುತ್ತಿವೆ.

ಮುಖ್ಯ ದೇವರಾಗಿ ಶ್ರೀ ವಿಷ್ಣು ಮೂರ್ತಿ ಅಲ್ಲದೆ, ಪಾರ್ಶ್ವದಲ್ಲಿ ಶ್ರೀ ಮಹಾಗಣಪತಿ ಹಾಗೂ ಶ್ರೀ ಶಾಸ್ತಾವು ದೇವರ ಗುಡಿಗಳು ಇವೆ. ಇತಿಹಾಸ ಸಂಶೋಧಕ ಹಾಗೂ ತಜ್ಞರೂ ಆದ ಶ್ರೀ ಪಿ. ಗುರುರಾಜ ಭಟ್‌ರವರ ಅಧ್ಯಯನ ಪ್ರಕಾರ–ಸದ್ರಿ ಎಂಡೋಮೆಂಟ್ ದೇವಳವು ಸುಮಾರು 800 ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿದೆ ಎಂದು ತಿಳಿದುಬರುತ್ತದೆ.

ಗ್ರಾಮ ದೇವರಾದ ಶ್ರೀ ಜನಾರ್ಧನ ಸ್ವಾಮಿಯ ಜಾತ್ರೋತ್ಸವದ ಅವಭೃತ ಸ್ನಾನದ ದಿನದಂದು ಶ್ರೀ ದೇವರು ಬಟ್ರಪಾಡಿ ದೇವಳಕ್ಕೆ ಬಂದು ಅಲ್ಲಿ ಪೂಜಾಸೇವೆ ನೆರವೇರಿಸಿ ನಂತರ ಬಟ್ರಪಾಡಿ ದೇವಳದ ಕೆರೆಯಲ್ಲಿ ಅವಭೃತ ಸ್ನಾನ ಜರುಗುತ್ತಿತ್ತು ಎಂದು ಪೂರ್ವಜರಿಂದ ತಿಳಿದು ಬಂದಿದೆ. ದೇವಳದ ನಿವೇಶನವು 0.27 ಎಕ್ರೆ(27 ಸೆನ್ಸ್) ಜಾಗವನ್ನು ಹೊಂದಿದೆ. ಪ್ರಕೃತ ದೇವಳದ ಆಡಳಿತ ಸಮಿತಿಯು ಈ ಕೆಳಗಿನಂತಿದೆ.

ಬಟ್ರಪಾಡಿ ಶ್ರೀ ರಾಧಾಕೃಷ್ಣ ಭಟ್, ನಿವೃತ್ತ ಪ್ರಾಂಶುಪಾಲರು ಹಾಗೂ ಪುರೋಹಿತರು (ಆಡಳಿತ ಮೊಕ್ತೇಸರರು), ಬಟ್ರಪಾಡಿ ಸೂರ್ಯನಾರಾಯಣ ಭಟ್ (ಕಾರ್ಯದರ್ಶಿ ಹಾಗೂ ಅರ್ಚಕರು), ಎನ್.ಎಸ್. ದಿನೇಶ್ ರಾವ್ ಕುಡಿಪಾಡಿ , ಎನ್.ಎಸ್. ಹರಿಹರ ರಾವ್ ಕುಡಿಪಾಡಿ, ಎನ್.ಎಸ್. ಸುಕುಮಾರ ಕುಡಿಪಾಡಿ (ಸದಸ್ಯರು)

ಬ್ರಹ್ಮಕಲಶೋತ್ಸವದ ದಿನದಂದು ಪ್ರತಿವರ್ಷ ದೇವಳದಲ್ಲಿ ವಿಶೇಷ ವಾರ್ಷಿಕ ಪೂಜೆಯನ್ನು ಊರ ಭಕ್ತಾಧಿಗಳ ಸಹಯೋಗದೊಂದಿಗೆ ನಡೆಸಿಕೊಂಡು ಬರಲಾಗುತ್ತಿದೆ.

**ಶ್ರೀಶಾರದಾ ಪತ್ರಿಕೆಯ ಓದುಗರಿಗೆ ಯುಗಾದಿ ಹಬ್ಬದ ಶುಭಾಶಯಗಳು**

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436

**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging


# ಕೊಡಚಾದ್ರಿಗೆ ಪ್ರವಾಸ

–ಸುರೇಶ್ ಶಾನುಭಾಗ್

ತಾ.12–02–2017ರಂದು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಉಡುಪಿ (ರಿ.) ಯುವವೇದಿಕೆಯ ಆಶ್ರಯದಲ್ಲಿ ಕೊಲ್ಲೂರು ಬಳಿಯ ಕೊಡಚಾದ್ರಿ ಬೆಟ್ಟಕ್ಕೆ ಪ್ರವಾಸವನ್ನು ಕೈಗೊಳ್ಳಲಾಗಿತ್ತು. ಬೆಳಿಗ್ಗೆ 6–30ಕ್ಕೆ ನಮ್ಮ ಪ್ರವಾಸ ಆರಂಭವಾಯಿತು. ಶ್ರೀಶಾರದೆಗೆ ವಂದಿಸಿ ಬಸ್ಸಿನಲ್ಲಿ ಕೊಲ್ಲೂರಿನ ಕಡೆಗೆ ನಮ್ಮ ಪ್ರಯಾಣವನ್ನಾರಂಭಿಸಿದೆವು. ಪ್ರಯಾಣದುದ್ದಕ್ಕೂ ಮಹಿಳೆಯರಿಂದ ಭಕ್ತಿಗೀತೆಗಳು ಹಾಗೂ ಕಾಪು ಮಲ್ಲಿಕಾರ್ಜುನ ರಾಯರಿಂದ ಚಿತ್ರಗೀತೆಗಳು ಸುಮಧುರವಾಗಿ ಮೂಡಿಬಂದವು. ನಡುವೆ ಅಂತ್ಯಾಕ್ಷರಿಯೂ ಇತ್ತು. 8–00 ಗಂಟೆಗೆ ಕೊಲ್ಲೂರು ತಲುಪಿ ಜ್ಯೋತಿ ರೆಸಿಡೆನ್ಸಿಯಲ್ಲಿ ಉಪಾಹಾರ ಸ್ವೀಕರಿಸಿದೆವು.

ಕೊಡಚಾದ್ರಿಗೆ ಮುಂದಿನ ಪ್ರಯಾಣ ಜೀಪಿನಲ್ಲಿ ಮುಂದುವರಿಯಿತು. ಒಂದೂವರೆ ತಾಸಿನ ಪ್ರಯಾಣ. ನಿಟ್ಟೂರು ಎಂಬಲ್ಲಿಯ ವರೆಗೆ ರಸ್ತೆ ಚೆನ್ನಾಗಿತ್ತು. ನಂತರ ಮಣ್ಣಿನ ರಸ್ತೆ. ರಸ್ತೆ ಎನ್ನುವ ಬದಲು ನೀರು ಹರಿಯುವ ಚರಂಡಿಯೆನ್ನಬಹುದೇನೋ. ತಿರುವುಮುರಿವು ನಿಂದ ಕೂಡಿತ್ತು. ವಾಲುತ್ತ ಕುಲುಕುತ್ತಾ ಪ್ರಯಾಣಿಸಿ ಒಂದು ದೇವಸ್ಥಾನದ ಬಳಿ ಬಂದು ಸೇರಿದೆವು. ಮುಂದಿನ ಪ್ರಯಾಣ ಕಾಲುದಾರಿಯಲ್ಲಿ. ಕಡಿದಾದ ಪರ್ವತಶ್ರೇಣಿಯನ್ನು ನೋಡುತ್ತಾ ಪೋಟೋ ತೆಗೆಯುತ್ತಾ, ಸೆಲ್ಫಿ ಹೊಡೆಯುತ್ತಾ ಕೊಡಚಾದ್ರಿಬೆಟ್ಟದ ತುತ್ತತುದಿಯನ್ನು ತಲುಪಿದೆವು. ಅಲ್ಲಿ ಶ್ರೀ ಶಂಕರಾಚಾರ್ಯರು ತಪಸ್ಸುಮಾಡಿದ ಸ್ಥಳದಲ್ಲಿರುವ ಸಣ್ಣಗುಡಿಯನ್ನು ದರ್ಶಿಸಿದೆವು. ಹಿರಿಯರಾದ ಶ್ರೀ ಭಾಸ್ಕರ ರಾಯರು ಹಾಗೂ ಶ್ರೀಮತಿ ಹರಿಣಿಯವರೂ ಸಹಾ ಬೆಟ್ಟದ ತುದಿಗೆ ಹತ್ತಿ ಬಂದದ್ದು ವಿಶೇಷವಾಗಿತ್ತು. ಹಿಂದಿರುಗಿ ಬರುವಾಗ ಗಣಪತಿ ದೇವಸ್ಥಾನಕ್ಕೆ ಭೇಟಿ ಕೊಟ್ಟೆವು. ಹತ್ತಿರದ ಐ.ಬಿಯಲ್ಲಿ ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಭೋಜನದ ನಂತರ ಶ್ರೀ ಗಣೇಶರಾಯರು "ನೇಮ್ ದ ಪ್ರೊಡಕ್ಟ್" ಆಟವನ್ನು ಆಡಿಸಿದರು. ಟಿ.ವಿಯಲ್ಲಿ ಬರುವ ಜಾಹೀರಾತಿನ ಉತ್ಪನ್ನದ ಹೆಸರನ್ನು ಬರೆಯುವುದು ಈ ಆಟ. ಪ್ರಥಮ ಬಹುಮಾನವನ್ನು ವಿಕೇಶ ವಸಂತ ರಾವ್, ದ್ವಿತೀಯ ಬಹುಮಾನವನ್ನು ಶ್ರೀಮತಿ ಕಾವ್ಯಾ ಹಾಗೂ ತೃತೀಯ ಬಹುಮಾನವನ್ನು ಕುಮಾರಿ ದೀಪ್ತಿಯವರು ಪಡೆದರು. ಬಹುಮಾನ ವಿತರಣೆಯನ್ನು ಶ್ರೀ ಕೆ. ಸುರೇಶ್ ರಾವ್, ಶ್ರೀಮತಿ ನಾಗವಲ್ಲಿ ಹಾಗೂ ಶ್ರೀಮತಿ ಉಷಾಶ್ಯಾನುಭಾಗ್ ಮಾಡಿದರು. ಅಲ್ಲಿಂದ ಕೊಲ್ಲೂರಿಗೆ ಹಿಂತಿರುಗಿ ಮೂಕಾಂಬಿಕೆಯ ದರ್ಶನವನ್ನು ಪಡೆದು ಉಡುಪಿಯತ್ತ ಪ್ರಯಾಣ ಬೆಳೆಸಿದೆವು. ಪುನಃ ಶ್ರೀ ಮಲ್ಲಿಕಾರ್ಜುನರಾಯರ ಸುಶ್ರಾವ್ಯ ಕಂಠದಿಂದ ಸುಮಧುರ ಗಾಯನ ಮೂಡಿಬಂತು. ಪ್ರಯಾಣವನ್ನು ಆಯೋಜಿಸಿದ ಶ್ರೀ ವಸಂತ ರಾವ್ ಕರಂಬಳ್ಳಿ ಮತ್ತು ಶ್ರೀ ಕೃಷ್ಣಾನಂದ ಇನ್ನಂಜೆ ಇವರಿಗೆ ಎಲ್ಲರೂ ಧನ್ಯವಾದವಿತ್ತರು. ಸಂಜೆ 7–30ಕ್ಕೆ ಉಡುಪಿಯನ್ನು ತಲುಪಿದೆವು.

# ಪಾದೆಬೆಟ್ಟಿನಲ್ಲಿ ದುರ್ಗಾನಮಸ್ಕಾರ



ತಾ.07–02–2017ರಂದು ಪಾದೆಬೆಟ್ಟಿನ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯು ನೆರವೇರಿತು. ಶ್ರೀ ಸುಬ್ರಹ್ಮಣ್ಯ ಭಟ್ ಹಾಗೂ ಶ್ರೀ ಅರವಿಂದ ಶರ್ಮರವರು ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಆಡಳಿತ ಮೊಕ್ತೇಸರರಾದ ಶ್ರೀ ಬಿ.ಜಯರಾಮರಾವ್, ಶ್ರೀ ಮೋಹನ್‌ರಾವ್, ಶ್ರೀ ದಿವಾಕರ್ ರಾವ್, ಶ್ರೀ ಸುಧಾಕರ ಬೆಳ್ಳೆ ಹಾಗೂ ಅಪಾರ ಸಂಖ್ಯೆಯ ಭಕ್ತಾಧಿಗಳು ಪಾಲ್ಗೊಂಡಿದ್ದರು.

# ಹಿರಿಯ ನಾಗರಿಕರ ಸಮಾವೇಶದಲ್ಲಿ ಶ್ರೀ ಸಿ.ಎಸ್.ರಾವ್ ವಿಚಾರ ಮಂಡನೆ

ಇತ್ತೀಚೆಗೆ ಹರಿದ್ವಾರದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಹಿರಿಯ ನಾಗರಿಕರ ಸಮ್ಮೇಳನದಲ್ಲಿ ಉಡುಪಿ ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಸಮ್ಮೇಳನದ ಪ್ರತಿನಿಧಿಗಳನ್ನುದ್ದೇಶಿಸಿ "ಆಧ್ಯಾತ್ಮ ಮತ್ತು ಹಿರಿಯನಾಗರಿಕರು" ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು.



# ಹರಿದಾಸ ಶ್ರೀ ಮ.ನಾ. ಹೆಬ್ಬಾರ್ ರವರಿಗೆ ಸಮ್ಮಾನ



ಲಯನ್ಸ್ ಜಿಲ್ಲೆ 317ಸಿ ಇವರ ಆಶ್ರಯದಲ್ಲಿ ಮಲ್ಪೆ ಲಯನ್ಸ್ ಕ್ಲಬ್‌ನವರು ಇತ್ತೀಚೆಗೆ ಲಯನ್ಸ್ ಜಿಲ್ಲಾ ಗವರ್ನರರ ಉಡುಪಿ ಭೇಟಿಯ ಸಂದರ್ಭದಲ್ಲಿ ಉಡುಪಿಯ 'ಶಾರದಾ ಇಂಟರ್‌ನೇಶನಲ್ ಹೋಟೆಲ್ ಸಭಾಂಗಣದಲ್ಲಿ ಹರಿದಾಸ ಶ್ರೀ ಮ.ನಾ.ಹೆಬ್ಬಾರ, ಇವರನ್ನು ಅವರ ಸಾಧನೆಗಳಿಗಾಗಿ ಸಂಮಾನಿಸಿದರು. ಶ್ರೀ ಹೆಬ್ಬಾರರಿಗೆ ಪೇಟಾ ತೊಡಿಸಿ, ಹಾರಾರ್ಪಣೆಗೈದು, ಸಂಮಾನ ಪತ್ರ, ಫಲವಸ್ತು, ನೆನಪಿನ ಕಾಣಿಕೆ ಇತ್ಯಾದಿಗಳನ್ನಿತ್ತು ಆತ್ಮೀಯವಾಗಿ ಸಂಮಾನಿಸಲಾಯಿತು. ಲಯನ್ಸ್ ಜಿಲ್ಲಾ ಗವರ್ನರ್ ಶ್ರೀ ದಿವಾಕರ ಶೆಟ್ಟಿ, ಮಲ್ಪೆ ಲಯನ್ಸ್ ಕ್ಲಬ್‌ನ ಅಧ್ಯಕ್ಷೆ ಶ್ರೀಮತಿ ಗಿರಿಜಾ ತಲ್ಲೂರು ಶಿವರಾಮ ಶೆಟ್ಟಿ, ಶ್ರೀ ತಲ್ಲೂರು ಶಿವರಾಮ ಶೆಟ್ಟಿ ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಹೆಜಮಾಡಿಯಲ್ಲಿ ಶ್ರೀ ಮ.ನಾ. ಹೆಬ್ಬಾರರಿಂದ ಹರಿಕಥೆ

ಹೆಜಮಾಡಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಾರ್ಷಿಕ ಹಬ್ಬದ ಸಂದರ್ಭದಲ್ಲಿ ದಿನಾಂಕ 02–03–2017ರಂದು ಸಂಜೆ ದೇವಸ್ಥಾನದಲ್ಲಿ ಶ್ರೀ ಹರಿದಾಸ ಮ.ನಾ. ಹೆಬ್ಬಾರರಿಂದ 'ಭಕ್ತ ಪ್ರಹ್ಲಾದ' ಎಂಬ ಕಥಾಭಾಗದ ಹರಿಕಥಾ ಕಾರ್ಯಕ್ರಮವು ಜರುಗಿತು. ಶ್ರೀ ಗಿರೀಶ್ ಮತ್ತು ಶ್ರೀ ಉಮೇಶ್ ಇವರುಗಳು ಪಕ್ಕವಾದ್ಯದಲ್ಲಿ ಕ್ರಮವಾಗಿ ಹಾರ್ಮೋನಿಯಂ ಮತ್ತು ತಬಲಾಗಳಲ್ಲಿ ಸಹಕರಿಸಿದ್ದರು. ದೇವಸ್ಥಾನದ ವ್ಯವಸ್ಥಾಪನ ಮಂಡಳಿಯ ಶ್ರೀ ಗಣೇಶ್‌ರವರು ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದಗಳನ್ನಿತ್ತರು.

# ರಾಷ್ಟ್ರೀಯ ಉಪಾಧ್ಯಕ್ಷರಾಗಿ ಡಾ| ಕೇದಿಗೆ ಅರವಿಂದ್ ರಾವ್

ಭಾರತೀಯ ಸೀನಿಯರ್ ಚೇಂಬರ್‌ನ 2017–18ನೇ ಸಾಲಿನ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಡಾ.ಕೇದಿಗೆ ಅರವಿಂದ್ ರಾವ್ ಆಯ್ಕೆಯಾಗಿದ್ದಾರೆ. ಚೇಂಬರ್‌ನ 16 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿ ಕರ್ನಾಟಕಕ್ಕೆ ಪ್ರಾತಿನಿಧ್ಯ ದೊರಕಿದೆ. ಫೆಬ್ರವರಿ 26ರಂದು ಕೇರಳದ ಮಾಹೆಯಲ್ಲಿ ಆಯೋಜಿಸಿದ ರಾಷ್ಟ್ರೀಯ ಅಧಿವೇಶನದಲ್ಲಿ ನಡೆದ ಚುನಾವಣೆಯಲ್ಲಿ ಆಯ್ಕೆಗೊಂಡಿದ್ದಾರೆ. ಇವರು ಭಾರತೀಯ ಜೇಸಿ ಪೂರ್ವ ವಲಯಾಧ್ಯಕ್ಷರಾಗಿ, ಲಯನ್ಸ್ ಜಿಲ್ಲೆ 317ಡಿಯ ಪೂರ್ವ ಜಿಲ್ಲಾ ಸಂಪುಟ ಕಾರ್ಯದರ್ಶಿಯಾಗಿ, ಮಂಗಳೂರು ಲಯನ್ಸ್ ಕ್ಲಬ್ ಪೂರ್ವಾಧ್ಯಕ್ಷರಾಗಿ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಕೇದಿಗೆ ಪ್ರತಿಷ್ಠಾನದ ಮುಖೇನ ಹಲವು ಸಾಹಿತ್ಯಾಭಿರುಚಿಯ ಕಾರ್ಯಕ್ರಮ ಆಯೋಜಿಸುತ್ತಿದ್ದಾರೆ.

## 2016–17ನೇ ಸಾಲಿನಲ್ಲಿ ಶ್ರೀ ಶಾರದಾ ಪತ್ರಿಕೆಯನ್ನು ಮಡಿಸುವ ಮತ್ತು ರವಾನೆ ಕಾರ್ಯಕ್ರಮವನ್ನು ಪ್ರಾಯೋಜಿಸಿ ಸಹಕರಿಸಿದ ಮಹನೀಯರು

| | | |
|---|---|---|
| ಜೂನ್ | 2016 | : ಶ್ರೀ ವೈ. ಮೋಹನ್ ರಾವ್ |
| ಜುಲೈ | 2016 | : ಶ್ರೀ ವೈ ಚಿತ್ತರಂಜನ್ ರಾವ್ |
| ಅಗೋಸ್ಟ್ | 2016 | : ಶ್ರೀ ಚಿದಂಬರ ಶ್ಯಾನುಭೋಗ್ |
| ಸಪ್ಟೆಂಬರ್ | 2016 | : ಶ್ರೀ ಬಿ.ಎಸ್.ರಾವ್ |
| ಅಕ್ಟೋಬರ್ | 2016 | : ಶ್ರೀ ಎಸ್.ಎಮ್ ರಾವ್ |
| ನವೆಂಬರ್ | 2016 | : ಶ್ರೀ ಅನಂತಪದ್ಮನಾಭ ಮಾಸ್ತಿಬೈಲು |
| ಡಿಸೆಂಬರ್ | 2016 | : ಶ್ರೀ ಟಿ ಜಗದೀಶ ರಾವ್ |
| ಜನವರಿ | 2017 | : ಶ್ರೀ ವಸಂತ ರಾವ್ ಕರಂಬಳ್ಳಿ |
| ಫೆಬ್ರವರಿ | 2017 | : ಶ್ರೀ ಅರವಿಂದ್ ರಾವ್ |

ಶ್ರೀಶಾರದಾ ಪತ್ರಿಕೆಯ ಮೇಲೆ ಅಭಿಮಾನದಿಂದ ಈ ಕಾರ್ಯಕ್ರಮವನ್ನು ಪ್ರಾಯೋಜಿಸಿದ ನಮ್ಮ ಬಂಧುಗಳಿಗೆ ಶ್ರೀಶಾರದಾ ಬಳಗದ ಹಾರ್ದಿಕ ಧನ್ಯವಾದಗಳು.

# ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ| ಅಂಬಲಪಾಡಿ ಕೃಷ್ಣರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ| ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ| ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮ.ನಾ.ಹೆಬ್ಬಾರ್ ಉಡುಪಿ

# ತಲೇಕಿಯಲ್ಲಿ ಮೂರು ತಲೆಮಾರಿನವರ ಶುಭ ಸಮಾರಂಭಗಳು



ದಿನಾಂಕ 02-02-2017ರಂದು ಕಡಬ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ಕಡಬ ಕುಂಭಾಟ್ ಮನೆತನದ ದಿ। ವಿಠಲರಾಯರ ಧರ್ಮಪತ್ನಿ ಶ್ರೀಮತಿ ಲಲಿತಮ್ಮನವರ "ಸಹಸ್ರಚಂದ್ರ ದರ್ಶನ ಶಾಂತಿ" ಮತ್ತು ಅವರ ಪ್ರಥಮ ಪುತ್ರ ಬೆಂಗಳೂರಿನಲ್ಲಿ ವಾಸವಾಗಿರುವ ಪ್ರಕಾಶ ರಾವ್ ಕಡಬ ಇವರಿಗೆ "ಷಷ್ಟ್ಯಬ್ದಿ ಶಾಂತಿ" ಮತ್ತು ಕಿರಿಯ ಪುತ್ರ ರಾಜೇಶ್ ಕಡಬ ಇವರ ಮಗ "ರಾಜನ್ಯ"ನಿಗೆ ನಾಮಕರಣ ಸಮಾರಂಭವು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಶಾಸ್ತ್ರೋಕ್ತವಾಗಿ ವಿಜೃಂಭಣೆಯಿಂದ ನಡೆಯಿತು. ಲಲಿತಮ್ಮ ನವರ 3 ಗಂಡು ಮತ್ತು 4 ಹೆಣ್ಣು ಮಕ್ಕಳು ಹಾಗೂ ಹದಿನೈದು ಮೊಮ್ಮಕ್ಕಳು ಮತ್ತು 3 ಮರಿ ಮಕ್ಕಳು ಬಂಧು ಭಾಂಧವರು ಈ ಸಂಭ್ರಮವನ್ನು ಕಣ್ಣು ತುಂಬಿಕೊಂಡರು. ಸಾಯಂಕಾಲ ನಡೆದ ಸಭಾ ಕಾರ್ಯಕ್ರಮದಲ್ಲಿ ಕೋಲ್ಪೆ ಸುಭದ್ರಮ್ಮ, ಬಯಂಬು ಭಾಸ್ಕರ ರಾವ್, ಗೋಪಾಲರಾವ್ ಕಡಬ, ಹರ್ಷಕುಮಾರ್ ಕೇದಗೆ ಹಾಗೂ ವೆಂಕಮ್ಮ ಇವರನ್ನು ಸನ್ಮಾನಿಸಲಾಯಿತು. ರಾಜೇಶ್ ಅಜ್ಜಾವರ ಶ್ರೀ ಶ್ರೀನಿವಾಸ ದೇವರ ಸೇವೆಗೈದ ದಿ। ವಿಠಲರಾವ್ ಅವರನ್ನು ನೆನಪಿಸುತ್ತಾ ಪ್ರಕಾಶ್ ರಾವ್ ಕಡಬ ಅವರ ಕಾರ್ಯ ಸಾಧನೆಯನ್ನು ಶ್ಲಾಘಿಸಿದರು, ಕೋಲ್ಪೆ ರಾಧಕೃಷ್ಣ ರಾವ್ ಸಭೆಯ ಅಧ್ಯಕ್ಷತೆ ವಹಿಸಿದ್ದರು, ಕುಂಭಾಟ್ ಭರತೇಶ್ವರ ಶರ್ಮ ಮುಂಬಯಿ ಹಾಗೂ ತಲೇಕಿ ವಿಜಯಲಕ್ಷ್ಮೀ ಶರ್ಮ ಮುಂಬಯಿ, ಪ್ರಕಾಶ್ ರಾವ್ ದಂಪತಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಶುಭ ಪ್ರಶಂಸೆ ನುಡಿದರು. ಶಂಕರನಾರಾಯಣ ಪೆರುವಾಜೆ ಲಲಿತಮ್ಮನವರ ಬಗ್ಗೆ ತಾನೇ ಸ್ವತಃ ರಚಿಸಿದ ಅಕ್ಷರ ಕವನವನ್ನು ವಾಚಿಸಿದರು. ಭಾಗ್ಯಶ್ರೀ, ನವ್ಯಶ್ರೀ ಹಾಗೂ ಸೌಜನ್ಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು ಮತ್ತು ವೀಣಾ ಗಣೇಶ ಜೋಷಿಯವರು ಕಾರ್ಯಕ್ರಮವನ್ನು ಸಂಯೋಜಿಸಿದರು. ಆ ಬಳಿಕ ಕೊಲಂಗಾನ ಮೇಳದವರಿಂದ ತುಲಸೀ ಜಲಂಧರ ಯಕ್ಷಗಾನ ಕಾರ್ಯಕ್ರಮ ನೆರೆದಿದ್ದವರನ್ನು ಮನರಂಜಿಸಿತು.

ಶ್ರೀ ಶ್ರೀ ಶೃಂಗೇರಿ ಪೀಠದ ಮಹಾ ಜಗದ್ಗುರುಗಳವರಿಂದ ಪ್ರತಿಷ್ಠಾಪಿಸಲ್ಪಟ್ಟ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ದಿನಾಂಕ 03-02-217ನೇ ಶುಕ್ರವಾರ 12 ತೆಂಗಿನಕಾಯಿ ಮಹಾಗಣಪತಿ ಹೋಮ, ಪವಮಾನ ಅಭಿಷೇಕ, ಶ್ರೀ ವಿಶ್ವನಾಥ ಸ್ವಾಮಿಗೆ ರುದ್ರಾಭಿಷೇಕದ ಬಳಿಕ ಮಹಾಪೂಜೆ ನೇರವೇರಿತು. ಈ ವಾರ್ಷಿಕೋತ್ಸವದ ಪ್ರಾಯೋಜಕತ್ವವನ್ನು ಶ್ರೀಮತಿ ಕನಕವಲ್ಲಿ ಶ್ರೀ ಹರ್ಷಕುಮಾರ್ ಕೇದಗೆಯವರು ವಹಿಸಿಕೊಂಡರು.

## 'ಅಕ್ಷರ ಕವನ'-ಪ್ರಕಾಶರಾವ್ ಕಡಬ

**ಷಷ್ಟ್ಯಬ್ದಿ ಸಮಾರಂಭದ ಶುಭಾಶಯಗಳು**

**ಪ್ರ**ಥಮ ಪುತ್ರನಾಗಿ ಕೆ.ವಿಠಲರಾವ್-ಲಲಿತಮ್ಮ ದಂಪತಿಗಳಿಗೆ ಜನಿಸಿಹರು,
**ಕುಂ(ಕಾ)**ಭಾಟು ವಂಶ' ಮನೆತನದ 'ಕಳಶ' ಪ್ರಾಯವಾಗಿ ಬೆಳೆದಿಹರು,
**ಶ(ಷ)**ಷ್ಟ್ಯಬ್ದಿ' ಯನ್ನು ಮುಗಿಸಿ 'ಶತಮಾನ' ಜೀವನದ ಕಡೆಗೆ ಸಾಗುತಿಹರು.
**ರಾ**ಜೇಶ್ವರಿ ಪತ್ನಿ, 'ಮಂಜುಶ್ರೀ' ಮತ್ತು 'ಭಾಗ್ಯಶ್ರೀ' ಪುತ್ರಿಯರನ್ನು ಪಡೆದಿಹರು,
**ವ**ಗ್ಗಟ್ಟಿನಲ್ಲಿ ಸಹೋದರ-ಸಹೋದರಿಯರ ಜತೆಯಲ್ಲಿ ಬಾಳುತಿಹರು.
**ಕ**ನಾಟಕ ರಾಜ್ಯ ಸರ್ಕಾರದ 32 ವರ್ಷ ಸುದೀರ್ಘ ಸೇವೆಯಿಂದ ನಿವೃತ್ತರಾಗಲಿಹರು,
**ಡಂ**ಭ-ಆಡಂಬರವಿಲ್ಲದೆ ಜನ-ಮನ-ಧನ (ಜೀವಮಾನ) ಸೇವೆ ಗೈಯುತಿಹರು,
**ಬಂ**ಧು ಬಳಗದವರೆಲ್ಲರಿಗೂ ಆದರದ 'ಬಹುಜನಪ್ರಿಯ' ವಾಗಿಹರು.
ಪ್ರೀತಿಯ 'ಪ್ರಕಾಶ ರಾವ್ ಕಡಬ' ಇವರು.

## 'ಅಕ್ಷರ ಕವನ'-ಅಕ್ಕರೆಯ ಲಲಿತ ಅಮ್ಮ

**ಸಹಸ್ರ ಚಂದ್ರ ದರ್ಶನದ ಶುಭಾಶಯಗಳು**

**ಅ**ಪ್ಪ ಭವಾನಿ ಶಂಕರರಾವ್, ಅಮ್ಮ ಮಹಾಲಕ್ಷ್ಮೀಯವರ ಎರಡನೇ ಮಗಳಾಗಿಹರು,
**ಆ**ದರ್ಶ ಜೀವಿ, ಶ್ರೀ ಕೆ.ವಿಠಲರಾಯರ ಧರ್ಮಪತ್ನಿ ಶ್ರೀಮತಿ 'ಲಲಿತಮ್ಮ'ನವರು'
**ಇ**ಬ್ಬರು ಸಹೋದರರು ಮತ್ತು ಇಬ್ಬರು ಸಹೋದರಿಯರನ್ನು ಹೊಂದಿಹರು,
**ಈ**ಶ, ಶ್ರೀ ಶ್ರೀನಿವಾಸನ ದಯದಲ್ಲಿ ಸುಖಸಂಸಾರ ಸಾಗರವ ಸಾಗಿಸಿಹರು,
**ಉ**ತ್ತಮ ಗೃಹಿಣಿಯಾಗಿ, ಮನೆತನದಿ ಒಳ್ಳೆಯ ಹೆಸರನ್ನು ಗಳಿಸಿಹರು,
**ಊ**ರು ಕಡಬದ, ತಲೇಕಿ 'ಕುಂಭಾಟುವಂಶದ' ಮನೆಯಲ್ಲಿ ವಾಸವಾಗಿಹರು,
**ಎ**ಂಭತ್ತನೇ ಸಂವತ್ಸರದ "ಸಹಸ್ರ ಚಂದ್ರ ದರ್ಶನ"ದ ಸೌಭಾಗ್ಯ ಪಡೆಯುತಿಹರು,
**ಏ**ಳು ಮಕ್ಕಳನ್ನು (3 ಗಂಡು+4 ಹೆಣ್ಣು) 15 ಮೊಮ್ಮಕ್ಕಳನ್ನು, 3 ಮರಿಮಕ್ಕಳನ್ನು ಹೊಂದಿಹರು.
**ಐ**ವತ್ತು ವರ್ಷಗಳಿಗೂ ಮಿಕ್ಕಿದ ಸುಖ ದಾಂಪತ್ಯ-ಜೀವನವನ್ನು ನಡೆಸಿಹರು,
**ಒ**ಳ್ಳೆಯ ಮಾತೆಯಾಗಿ, 'ಅಜ್ಜಿ-ಪಿಜ್ಜಿಯಾಗಿ, ಎಲ್ಲರ ಪ್ರೀತಿ ಪಾತ್ರಳಾಗಿಹರು,
**ಓ**ದು-ಬರಹ ಕಡಿಮೆಯಾದರೂ, ಒಪ್ಪ-ಓರಣವಾಗಿ ಜೀವನ ಸಾಗಿಸಿದರು,
**ಔ**ದಾರ್ಯ, ಆದರ ಆತಿಥ್ಯದಲ್ಲಿ ಬಂಧುಗಳೆಲ್ಲರ ಮೆಚ್ಚುಗೆ ಗಳಿಸಿಹರು,
**ಅಂ**ದದ, ಆನಂದದ, ಸುಂದರ, ಸಂಸಾರವನ್ನು ಹೊಂದಿಹರು,
**ಅಃ** ಎನುತಲಿ, ಆದರದ ಸ್ವಾಗತ ಕೋರುವ 'ಅಕ್ಕರೆಯ ಲಲಿತಮ್ಮ'ನವರು
-ಸದಾ ಶುಭಾಶಯವನ್ನು ಆಶಿಸುವ

**- ಶಂಕರನಾರಾಯಣ ಪೆರುವಾಜೆ ಮತ್ತು ಸುಶೀಲಾ ಎಸ್.ರಾವ್** (ತುಂಗಾನಗರ, ಬೆಂಗಳೂರು)

# ಗಡ್ಡದಜ್ಜನ ಮಂತ್ರ-ತಂತ್ರ

(ನನ್ನ ನೆನಪಿನಂಗಳದಿಂದ-ಜಿ.ಕೆ.ಕೊಲ್ಪೆ)

ದೂರದ ಸಂಬಂಧಿ ರಾಮಕೃಷ್ಣಯ್ಯನವರು ಊರುಬಿಟ್ಟು ಹೋದವರು ಕಾಷಾಯವೇಷ ಭೂಷಣದಲ್ಲಿ ಗಡ್ಡ-ಶಿಖಾಧಾರಿಯಾಗಿ ಸನ್ 1950-60ರ ಮಧ್ಯ ನಮ್ಮ ಮೂಲಮನೆಗೆ ಆಗಮಿಸಿದರು. ಉತ್ತರ ಭಾರತದಲ್ಲಿ ಸಂಚರಿಸಿ, ಹಿಮಾಲಯ ತಪ್ಪಲಲ್ಲಿ ಋಷಿ-ಮುನಿಗಳ ಸಂಪರ್ಕದಲ್ಲಿ ಸ್ವಲ್ಪ ತಾಂತ್ರಿಕ-ಮಾಂತ್ರಿಕ, ಜ್ಯೋತಿಷ್ಯ, ಹಸ್ತ ಸಾಮುದ್ರಿಕ ವಿದ್ಯೆ ಕಲಿತು ತಮ್ಮ ಜೀವನ ನಿರ್ವಹಣೆಗೆ ದಾರಿ ಕಂಡುಕೊಂಡರಂತೆ. ಇದಲ್ಲದೆ, ಬೆಲೆ ಬಾಳುವ ಕಲ್ಲಿನ ಹರಳುಗಳ (ಪಚ್ಚೆ, ಕೆಂಪು, ನೀಲ, ಪುಷ್ಯರಾಗ ಇತ್ಯಾದಿ) ವ್ಯಾಪಾರ ಕೂಡಾ ಮಾಡುತ್ತಿದ್ದರು. ಅವರ ಹಿರಿಯರ ಆಸ್ತಿ-ಪಾಸ್ತಿಗಳನ್ನು ತಮ್ಮಂದಿರಿಗೆ ಬಿಟ್ಟು ಬ್ರಹ್ಮಚಾರಿಯಾಗಿ ವೈರಾಗ್ಯ ಜೀವನ ನಡೆಸುತ್ತಾ, ದೇವಸ್ಥಾನ-ಛತ್ರಗಳಲ್ಲಿ, ಕೆಲವೊಮ್ಮೆ ಸಂಬಂಧಿಕರ ಹಾಗೂ ಸ್ನೇಹಿತರ ಮನೆಗಳನ್ನು ಆಶ್ರಯಿಸುತ್ತಾ ತಮ್ಮ ಬದುಕು ಸಾಗಿಸುತ್ತಿದ್ದರಂತೆ. ಆ ಕಾಲ ಹಾಗಿತ್ತು! ನಮ್ಮ ಮನೆಯೂ ಆದರಾತಿಥ್ಯಕ್ಕೆ ಹೆಸರುವಾಸಿಯಾಗಿತ್ತು. ನನ್ನ ತಂದೆಯವರು ಆಯುರ್ವೇದ ಔಷಧಿ ಪಂಡಿತರಾಗಿದ್ದು ಸ್ವಲ್ಪ ಮಂತ್ರವಾದವೂ ಗೊತ್ತಿತ್ತು. ಇದೆನ್ನೆಲ್ಲಾ ತಿಳಿದೇ ರಾಮಕೃಷ್ಣಯ್ಯನವರು ನಮ್ಮಲ್ಲಿಗೆ ಆಗಮಿಸಿದ್ದರು. ಅವರ ಹೊಂದಾಣಿಕೆ-ಅನುಷ್ಠಾನಗಳಿಂದ ನಮ್ಮೆಲ್ಲರ ಪ್ರೀತಿ ಪಾತ್ರರಾದರು ಅವರಿಗೆ ಅನುಕೂಲವಾಗುವಂತೆ ಮನೆಯ ಮಹಡಿಯಲ್ಲಿ ಉಳಕೊಳ್ಳಲು ವ್ಯವಸ್ಥೆ ಮಾಡಲಾಯಿತು. ಅವರನ್ನು 'ಗಡ್ಡದಜ್ಜ'ಎಂದು ಕರೆಯಲು ಪ್ರಾರಂಭಿಸಿದೆವು.

ರಾತ್ರಿಯ ಲಘು ಉಪಾಹಾರದ ನಂತರ, ಅವರ ಸಾಧನೆಗಳು, ಉತ್ತರ ಭಾರತದ ಪ್ರವಾಸ ಅನುಭವಗಳು, ಋಷಿ ಮುನಿಗಳೊಂದಿಗೆ ಕಳೆದ ದಿನಗಳ ಕಥೆಗಳನ್ನು ಕೇಳುತ್ತಿದ್ದೆವು. ಒಮ್ಮೆ ರಾಜಸ್ಥಾನ ಮರುಭೂಮಿಯಲ್ಲಿ ಸಂಚರಿಸುತ್ತಾ ದಾರಿತಪ್ಪಿ ರಾತ್ರಿಯಾದಾಗ ದಿಕ್ಕು ತೋಚದೆ ಮಂತ್ರಪಠಣ ಮಾಡುತ್ತಾ ಸಾಗುವಾಗ ದೂರದ ಗುಡಿಸಲೊಂದರಲ್ಲಿ ದೀಪ ಕಂಡು ಹತ್ತಿರ ಹೋದಾಗ ಮುದುಕಿಯೋರ್ವಳು ಸತ್ಕರಿಸಿ, ರಾತ್ರಿ ಕಳೆದು ಬೆಳಗ್ಗೆ ಪ್ರಯಾಣ ಮುಂದುವರಿಸಲು ಸಲಹೆಕೊಟ್ಟದ್ದು, ಮಾರನೇ ದಿನ ಏಳುವಾಗ ಅಲ್ಲಿ ಗುಡಿಸಲಾಗಲೀ-ಮುದುಕಿಯಾಗಲೀ ಕಾಣದೇ ಇದ್ದದ್ದು, ಇಂತಹ ರೋಮಾಂಚಕ ವಿಷಯಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರು. ಗಾಯತ್ರಿ ಮಂತ್ರದ ಅನುಷ್ಠಾನದಿಂದ ಬಹಳಷ್ಟು ತೊಂದರೆಗಳಿಂದ ಪಾರಾಗಿದ್ದರಂತೆ !

ಊರಿಗೆ ಬಂದನಂತರ, ಪ್ರಸಿದ್ಧ ಕ್ಷೇತ್ರ ಒಂದರ ಸಮೀಪದಲ್ಲಿರುವ ಸಂಬಂಧಿಯೋರ್ವರ ಮನೆಯಲ್ಲಿ ವಾಸ್ತವ್ಯ ಮಾಡಿದರಂತೆ. ನನ್ನ ತಂದೆಯವರಿಗೂ ಆ ಮನೆಯವರ ಪರಿಚಯವಿತ್ತು. ಅಲ್ಲಿಯ ವಿಚಿತ್ರ ಅನುಭವವನ್ನು ನಮ್ಮ ಮುಂದೆ ಬಿಚ್ಚಿಟ್ಟಂತೆ, ನಾವು ಭಯಭೀತರಾಗಿ ರೋಮಾಂಚನಗೊಂಡೆವು. ಆ ಮನೆಯ ಸುತ್ತ-ಮುತ್ತಲಿದ್ದ ಅಡಿಕೆತೋಟ, ಕಾಡು/ಗುಡ್ಡೆ ಇತ್ಯಾದಿ ಆ ಕ್ಷೇತ್ರಕ್ಕೆ ಸಂಬಂಧಪಟ್ಟದ್ದಾಗಿತ್ತು. ಮನೆಯವರು ಅದರ ಉಸ್ತುವಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. ಶ್ರೀ ಕ್ಷೇತ್ರದ ವತಿಯಿಂದ ಅವರ ಜೀವನ ನಿರ್ವಹಣೆಯಾಗುತ್ತಿತ್ತು ನಮ್ಮ 'ಗಡ್ಡದಜ್ಜ' ಒಂದು ದಿನ ಆ ಮನೆಯ ಜಗಲಿಯಲ್ಲಿ ಠಿಕಾಣಿ ಹೂಡಿದರು. ರಾತ್ರಿ ಮಲಗಲು ಒಳಗಿನ ಕೋಣೆಯೊಂದರಲ್ಲಿ ವ್ಯವಸ್ಥೆ ಮಾಡಿದಾಗ, ಗಾಳಿ-ಬೆಳಕಿರುವ ಈ ಜಗಲಿಯೇ ಉತ್ತಮವೆಂದರೂ, ಮನೆಯವರು ಒಪ್ಪದೆ, ಅಲ್ಲಿ ಮಲಗಿದವರಿಗೆ 'ಪ್ರೇತಬಾಧೆ' ಯಿಂದಾಗುವ ವಿಷಯ ತಿಳಿಸಿದರು. ಆದರೆ ನಮ್ಮ ಮಾಂತ್ರಿಕ 'ಗಡ್ಡದಜ್ಜ' ಇದೆಕ್ಕೆಲ್ಲಾ ಹೆದರದೆ, ತಮ್ಮ ಅನುಷ್ಠಾನಗಳನ್ನು ಅಲ್ಲೇ ಮಾಡಿ ಮಲಗಿದರಂತೆ. ಮಧ್ಯರಾತ್ರಿ ಎಚ್ಚರವಾದಾಗ, ಕಿಟಕಿಯಿಂದ ಬೃಹದಾಕಾರದ ಮನುಷ್ಯ ಕೈಯೊಂದು ಅವರ ಹತ್ತಿರ ಬರಲು ಪ್ರಯತ್ನಿಸುತ್ತಿತಂತೆ. ಅವರು 'ಮಂತ್ರ ಪಠಣ' ಪ್ರಾರಂಭಿಸಿದಂತೆ 'ಕೈ' ಹಿಂದೆ ಸರಿಯಿತಂತೆ! ಇದೊಂದು ಕ್ಷುದ್ರ ಶಕ್ತಿಯ ಕೈವಾಡವೆಂದು ಅರಿತು ಉಳಿದ ರಾತ್ರಿಯನ್ನು ಜಪ-ತಪದಲ್ಲಿ ಕಳೆದರಂತೆ. ಮಾರನೇ ದಿನ ಮನೆಯವರಿಗೆ ವಿಷಯ ತಿಳಿಸಿದಾಗ, ಬ್ರಾಹ್ಮಣ ಬ್ರಹ್ಮಚಾರಿಯೊಬ್ಬ ಪಕ್ಕದಲ್ಲಿ ಆತ್ಮಹತ್ಯೆ ಮಾಡಿದ್ದು, ಅಪರ ಸಂಸ್ಕಾರಗಳಿಲ್ಲದೆ "ಬ್ರಹ್ಮರಾಕ್ಷಸ"ನಾಗಿದ್ದಾನೆಂದು ಊರವರಿಂದ ತಿಳಿದು ಬಂದಿತಂತೆ. ಹಾಗಾಗಿ, ಮನೆಯವರು ದೇವರ ಕೋಣೆಯ ಪಕ್ಕದಲ್ಲೇ ಮಲಗುತ್ತಿದ್ದರಂತೆ. ನಮ್ಮ ಗಡ್ಡದಜ್ಜ ಆ ಅಗೋಚರ ಬ್ರಹ್ಮರಾಕ್ಷಸನನ್ನು ತನ್ನ ಮಂತ್ರ ಶಕ್ತಿಯಿಂದ ತಾತ್ಕಾಲಿಕ 'ಬಂಧನ' ಮಾಡಿ ಎದುರಿನ ಆಲದ ಮರಕ್ಕೆ ಅಟ್ಟಿದರಂತೆ! "ಆತ್ಮಹತ್ಯೆ ಮಹಾಪಾಪ! ಮಾಡಿದವರಿಗೆ ಇಂತಹ ದುರ್ಗತಿ ತಪ್ಪಿದ್ದಲ್ಲ ಎಂದು ಹೇಳಲು 'ಗಡ್ಡದಜ್ಜ' ಮರೆಯಲಿಲ್ಲ! 'ಗಡ್ಡದಜ್ಜ'ನ ವಿವಿಧ ಸಾಧನೆಗಳು, ಆತ್ಮೀಯ ಹಾಸ್ಯಭರಿತ ಮಾತುಗಳು-ಮೇಲಾಗಿ ಅವರ ದೇವತಾ ಅನುಷ್ಠಾನಗಳು ನಮ್ಮೆಲ್ಲರ ಗೌರವಕ್ಕೆ ಪಾತ್ರವಾಗಿದ್ದು, ಅವರ ಅನುಭವಾಮೃತಗಳನ್ನು ನಾವು ನಂಬಿದ್ದೆವು! ಇನ್ನು ಇದರ "ಸತ್ಯಾಸತ್ಯತೆ" ಓದುಗರ ನಂಬಿಕೆಗೆ ಬಿಟ್ಟದ್ದು!

## ಅಮ್ಮ

ದೇವರಿಗೂ ಮಿಗಿಲಾದ ದೇವತೆ ಓ ಅಮ್ಮ
ನೀನಿಲ್ಲದ ಬದುಕು ಶೂನ್ಯ
ನಿನ್ನ ಪಡೆದ ಈ ಜನುಮ ಧನ್ಯ
ಕಾವೇರಿ ನದಿಯಂತೆ ನೀಗುವಳು ಪಾಪವನು
ನಿಸ್ವಾರ್ಥ ಮನವೇ ತಾಯೀ
ತ್ಯಾಗಕ್ಕೆ ನೀ ಸ್ಪೂರ್ತಿ ಅಮ್ಮ
ನವಮಾಸದ ನೋವು ತಿನ್ನುವ
ತಾಯೆ ನಿನಗೆ ಸರಿಸಾಟಿ ಯಾರಮ್ಮ
ಎಲ್ಲೆ ಇದ್ದರೂ ಹೇಗೆ ಇದ್ದರೂ
ತನ್ನ ಕರುಳ ಕೂಗನ್ನು ಮರೆಯೋಲ್ಲ
ತನ್ನ ನೋವಲೇ ನಗು ಹರಿಸುತಾ
ತಾನುರಿದು ನೀಡುವಳು ಬೆಳಕನ್ನು
ಜನುಮಕ್ಕೆ ದೈವ ನೀ ತಾನೇ ಅಮ್ಮ
ನೀ ಇರದೆ ನಾ ಬಾಳೆನು
ಮನಸೆಂಬ ದೇಗುಲದಿ
ಹೃದಯದ ಹಣತೆಯಲಿ
ಬೆಳಗುತಿದೆ ಆ ದಿವ್ಯ ಜ್ಯೋತಿ
ಚಿರನೂತನ ನಿನ್ನ ದೀಪ

**-ಸುಹಾಸಿನಿ ರಾವ್, ನಂದಳಿಕೆ**

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.**

**ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.**

**ಪ್ರೊ : ಮಂಜುನಾಥ ಹೆಬ್ಬಾರ್** **ಸಂಪರ್ಕ ಸಂಖ್ಯೆ 9611099894**

# ಕಂಡಿದ್ದು ಕೇಳಿದ್ದು (ಲೇಖನಗಳ ಸಂಗ್ರಹ)

- ವೈ. ಮೋಹನ ರಾವ್

'ಕಂಡಿದ್ದು ಕೇಳಿದ್ದು' ಕೃತಿಯ ಪ್ರಕಾಶಕರಾದ ಶ್ರೀಮತಿ ಮಂಜುಳಾ ಮಂಜುನಾಥ್ ಇವರ ''ಪ್ರಕಾಶಕರ ಆಶಯ'' ಹೀಗಿದೆ-''ಆರೋಗ್ಯಕರ ಆಲೋಚನೆಗಳನ್ನು, ಉದಾತ್ತ ಧ್ಯೇಯಗಳನ್ನು, ಸಂಸ್ಕಾರಯುಕ್ತ ಕಾರ್ಯಚಟುವಟಿಕೆಗಳನ್ನು ಹಾಗೂ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರ ಯುಕ್ತ ಸಾಹಿತ್ಯದ ಕೃತಿಗಳನ್ನು ಪ್ರಕಟಿಸುವ ಮೂಲಕ ನಾಡಿನ ಮಕ್ಕಳಿಗೆ, ಸಹೃದಯ ಓದುಗರಿಗೆ ತಲುಪಿಸುವ ನಿಟ್ಟಿನಲ್ಲಿ ನಮ್ಮ ಪ್ರಕಾಶನದ ಕೈಂಕರ್ಯ ಸಾಗುತ್ತಿದೆ.

ಪ್ರಸ್ತುತ ಶ್ರೀ ಮಾರ್ಪಳ್ಳಿ ಆರ್.ಮಂಜುನಾಥ್ ಇವರು ಬರೆದ ಇಪ್ಪತ್ತೊಂದನೆಯ ಕೃತಿ ''ಕಂಡಿದ್ದು-ಕೇಳಿದ್ದು'' ಲೇಖನಗಳು ಚಿಕ್ಕ-ಚೊಕ್ಕದಾಗಿ ಲೇಖಕರು ಕಂಡು ಕೇಳಿದ ಅನುಭವಗಳೊಂದಿಗೆ ಅಭಿಪ್ರಾಯಗಳನ್ನು ಸುಂದರ ಸರಳ ಶೈಲಿಯಲ್ಲಿ ನಿರೂಪಿಸಿದ್ದಾರೆ. ಓದುಗರು ಈ ಕೃತಿಯಲ್ಲಿನ ಎಲ್ಲ ಲೇಖನಗಳನ್ನು ಓದಿ ತಮ್ಮ ಅನುಭವಗಳೊಂದಿಗೆ ಮೆಲುಕು ಹಾಕಿ ವಿಮರ್ಶಿಸಿ ಮೆಚ್ಚುತ್ತಾರೆಂಬ ಪೂರ್ಣ ಭರವಸೆ ನಮಗಿದೆ''.

ಕೃತಿಯ ಲೇಖಕರಾದ ಮಾರ್ಪಳ್ಳಿ ಆರ್. ಮಂಜುನಾಥ್ ಇವರ ''ಲೇಖಕರ ನುಡಿ'' ಹೀಗಿದೆ- ''ನನ್ನ ಅಭಿಪ್ರಾಯಗಳನ್ನು-ಅನಿಸಿಕೆಗಳನ್ನು ಲೇಖನ ರೂಪದಲ್ಲಿ ಓದುಗರೊಂದಿಗೆ ಹಂಚಿಕೊಳ್ಳಲು 'ನಾವಿಕ' ಕನ್ನಡ ದಿನಪತ್ರಿಕೆ ಶಿವಮೊಗ್ಗ ವೇದಿಕೆಯನ್ನು ಒದಗಿಸಿದೆ.

ಹೀಗಾಗಿ ನನ್ನ ಅನೇಕ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾಗಿ ಓದುಗರ ಸಂಪರ್ಕ ಸಹನುಡಿಯ ಅವಕಾಶವೂ ನನಗೆ ದೊರಕಿದೆ.

ನನ್ನ ಎಲ್ಲ ಲೇಖನಗಳನ್ನು ಒಂದು ಹೊತ್ತಿಗೆಯ ರೂಪದಲ್ಲಿ ಹೊರತರಲು ಪ್ರಕಾಶಕರು ಶ್ರೀಮತಿ ಮಂಜುಳಾ, ಶ್ರೀ ಮಹಾಗಣಪತಿ ಪ್ರಕಾಶನ ಶಿವಮೊಗ್ಗ ಇವರು ಆಸಕ್ತಿ ವಹಿಸಿ ಹೊತ್ತಿಗೆಯ ಪುಟದ ಮಿತಿಗಾಗಿ ಕೇವಲ 25 ಲೇಖನಗಳನ್ನು ಆಯ್ಕೆ ಮಾಡಿ ಪ್ರಕಟಿಸಿರುತ್ತಾರೆ''.


ಕೃತಿಯ 25 ಲೇಖನಗಳು ವಿಷಯ ವೈವಿಧ್ಯದಿಂದ ಕೂಡಿದೆ. ಕೆಲವು ಲೇಖನಗಳ ಕೆಲವು ಸಾಲುಗಳು ಹೀಗಿವೆ. 'ಮಾನವರಾಗಿಯೇ ಬದುಕೋಣ' ಲೇಖನದಲ್ಲಿ ಲೇಖಕರು ತಿಳಿಸುತ್ತಾರೆ ''ಎಷ್ಟೋ ವರ್ಷಗಳಿಂದ ಮಾನವನಿಗೆ ಶಾಂತಿಬೋಧೆ, ಜ್ಞಾನವನ್ನು ನೀಡಿ ಆಸೆಯೇ ದುಃಖಕ್ಕೆ ಮೂಲವೆಂದ ಭಗವಾನ್ ಬುದ್ಧನ ಭವ್ಯ ಮುಗಿಲೆತ್ತರ ಮೂರ್ತಿಯನ್ನು ಸ್ಫೋಟಿಸಿ ಒಡೆಯುವಾಗ ತಾಲಿಬಾನರಿಗೆ ಏನೂ ಅನಿಸಲಿಲ್ಲ. ಅವರುಗಳು ಒಡೆದಿದ್ದು ಕೇವಲ ಕಲ್ಲಿನ ಮೂರ್ತಿಯನ್ನಲ್ಲ, ಒಂದು ಸಂಸ್ಕೃತಿಯನ್ನು, ಅದು ಬಿಂಬಿಸುವ ಭಾವನೆಗಳನ್ನು. ಅಂತೆಯೇ ಬುದ್ಧನಿಗೆ ಜ್ಞಾನೋದಯವಾದ ಬೋಧಿವೃಕ್ಷದ ಸ್ಥಳದಲ್ಲಿ ಭಯೋತ್ಪಾದನೆ ನಡೆಸಿದ್ದು ಒಂದು ದುರಂತವೇ.

ಇನ್ನೊಂದು ಲೇಖನ 'ಪುಸ್ತಕ-ಓದುಗ-ಎಷ್ಟು ನಿಕಟ?'ದ ಸಾಲುಗಳು ಹೀಗಿವೆ - ''ಅತ್ಯಂತ ಕಡಿಮೆ ಪರ್ಸೆಂಟೇಜ್ ಇರುವವರು ಈ ನಿಜ ಓದುಗರು! ಹೊಸ ಪುಸ್ತಕ ಬಂದರೆ ಸಾಕು, ಹುಡುಕಿಕೊಂಡು ಹೋಗಿ ಖರೀದಿಸುತ್ತಾರೆ. ಅಷ್ಟೇ ಅಲ್ಲ ಪುಸ್ತಕದ ಒಂದು ಸಾಲು ಬಿಡದಂತೆ ಓದಿ ಆನಂದಪಡುತ್ತಾರೆ. ಮತ್ತೆ ಕೆಲವರು ಅದೇ ಕೃತಿಯನ್ನು ಮತ್ತೆ ಮತ್ತೆ ಓದುತ್ತಿರುತ್ತಾರೆ. ಆದರೆ ಆ ಬಗ್ಗೆ ವಿಮರ್ಶಿಸುವುದಿಲ್ಲ. ಇನ್ನೊಬ್ಬರೊಡನೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಿಲ್ಲ. ಕೃತಿಯನ್ನು ಓದಿ ತಮ್ಮ ಮನಸ್ಸಿನಲ್ಲಿಯೇ ಆನಂದಿಸುವ ಜಾಯಮಾನ ಅವರದ್ದು!

ಇನ್ನೂ ಅತ್ಯಂತ ಸಹೃದಯವೆನಿಸಿಕೊಂಡವರು ಅತಿ ವಿರಳ. ಕೃತಿಗಳನ್ನು ಕೊಂಡುಕೊಳ್ಳುತ್ತಾರೆ, ಓದುತ್ತಾರೆ. ಕೃತಿಯ ಗುಣಮಟ್ಟದ ಬಗ್ಗೆ ವಿಮರ್ಶಿಸುತ್ತಾರೆ. ಅಷ್ಟೇ ಅಲ್ಲ, ತಪ್ಪು-ಒಪ್ಪುಗಳಿದ್ದರೆ, ಆ ಬಗ್ಗೆ ತಮ್ಮ ಅನಿಸಿಕೆಗಳನ್ನು ಪತ್ರಿಕೆಗಳಿಗೆ ಬರೆದು ಅಥವಾ ಲೇಖಕರಿಗೆ ಬರೆದು ತಿಳಿಸಿಯೇ ಬಿಡುತ್ತಾರೆ. ಸಮಯ ಸಂದರ್ಭಗಳಲ್ಲಿ ಆ ಕೃತಿಯ ಬಗ್ಗೆ ಉದಾಹರಿಸಿ ಮೆಚ್ಚುಗೆ ಅಥವಾ ತೆಗಳಿಕೆ ನೀಡುತ್ತಾರೆ. ಆದರೆ ಇಂತಹವರು ಸಿಗುವುದು ಬಹಳ ದುರ್ಲಭ''.

ಮತ್ತೊಂದು ಲೇಖನ 'ವಚನೇ ಕಾ ದರಿದ್ರತಾ'ದಲ್ಲಿರುವ ಸಾಲುಗಳು-''ಪುರಾಣದ ಒಂದು ಸಣ್ಣ ಘಟನೆಯತ್ತ ಚಿತ್ತ ಹರಿಸಿದರೆ, ಕಪಿಗಳೆಲ್ಲ ಸಮುದ್ರ ದಾಟಿ ಲಂಕೆಗೆ ಹೇಗೆ ಹಾರಬೇಕೆಂದು ಚಿಂತಿಸಿ, ದಾರಿ ಕಾಣದಾದಾಗ ಜಾಂಬವಂತ ಹನುಮಂತನಲ್ಲಿದ್ದ ಸುಪ್ತಶಕ್ತಿಯನ್ನು ಹೊರತೆಗೆಯುವ ಪ್ರಯತ್ನ ಮಾಡುತ್ತಾನೆ. 'ನೀನೆಂತಹ ಸಮರ್ಥನೆಂಬುದು ನಿನಗೆ ಗೊತ್ತಿಲ್ಲ. ಈ ಸಮುದ್ರವನ್ನು ಲಂಘಿಸುವುದು ನಿನಗ್ಯಾವ ಲೆಕ್ಕ' ಎಂದು ಹುರಿದುಂಬಿಸಿದಾಗ ಹನುಮಂತನಲ್ಲಿ ಸುಪ್ತಶಕ್ತಿ ಜಾಗೃತವಾಗಿ ಲೀಲಾಜಾಲವಾಗಿ ಸಮುದ್ರವನ್ನು ಲಂಘಿಸಿದ ಎಂಬುದು ಒಂದು ದೃಷ್ಟಾಂತ. ಅರ್ಜುನನಿಗೆ ಶ್ರೀಕೃಷ್ಣ ಧೈರ್ಯ ತುಂಬಲು ಗೀತಾ ಉಪದೇಶ ಮಾಡಿದ್ದು ಸಹ ಇದಕ್ಕೊಂದು ಉದಾಹರಣೆ''.

8ನೇ ಪುಟಕ್ಕೆ...




ಕೃತಿ : **'ಕಂಡಿದ್ದು ಕೇಳಿದ್ದು (ಲೇಖನಗಳ ಸಂಗ್ರಹ)**, ಲೇಖಕರು : **ಮಾರ್ಪಳ್ಳಿ ಆರ್. ಮಂಜುನಾಥ್** ಪ್ರಕಾಶಕರು : **ಶ್ರೀಮತಿ ಮಂಜುಳಾ ಮಂಜುನಾಥ್, ಶ್ರೀ ಮಹಾಗಣಪತಿ ಪ್ರಕಾಶನ, ಶಿವಮೊಗ್ಗ** ಬೆಲೆ : **ರೂ.80/-**

# ಧಾರ್ಮಿಕ ಸುಭಾಷಿತಗಳು

–ಡಾ। ಪಿ.ವಿ. ಸತ್ಯನಾರಾಯಣ




ಸಂಸಾರವೆಂಬ ವಿಷವೃಕ್ಷಕ್ಕೆ ಅಮೃತ ಸಮಾನವಾದ ಎರಡು ಫಲಗಳಿವೆ. ಅವೆಂದರೆ ಸುಭಾಷಿತ ರಸವನ್ನು ಆಸ್ವಾದಿಸುವುದು ಮತ್ತು ಒಳ್ಳೆಯವರೊಡನೆ ಒಡನಾಟ. ಸಂಸ್ಕೃತ ಸಾಹಿತ್ಯವು ಇಂತಹ ಸುಭಾಷಿತಗಳ ಅಕ್ಷಯ ಕ್ಷೀರಸಾಗರ. ವೈದಿಕ ಸಾಹಿತ್ಯದಿಂದ ಮೊದಲ್ಗೊಂಡು ಇತ್ತೀಚಿನ ಸಾಹಿತ್ಯದವರೆಗೂ ಇದರ ಹರಹು.

ನಮ್ಮ ಪೂರ್ವಿಕರು ಸುಭಾಷಿತಗಳಲ್ಲಿ ಸಾರತಮವಾದ ಅರಿವನ್ನೂ, ಅಳವಾದ ಅನುಭವವನ್ನು ಅಡಕಗೊಳಿಸಿದ್ದಾರೆ. ಬದುಕಿನ ಸಿಹಿ-ಕಹಿಗಳನ್ನೂ, ಗುಣಾವಗುಣಗಳನ್ನೂ, ಒಲವು-ನಲಿವುಗಳನ್ನೂ ಸೂಚ್ಯವಾಗಿ, ವಾಚ್ಯವಾಗಿ ಈ ಸುಭಾಷಿತಗಳಲ್ಲಿ ತಿಳಿಸಿದ್ದಾರೆ. ಸುಭಾಷಿತಗಳು ಜೀವನದಷ್ಟೇ ವಿಸ್ತಾರವೂ, ವೈವಿಧ್ಯಪೂರ್ಣವೂ ಆಗಿವೆ. ಮುಂದಿನ ಜನಾಂಗಕ್ಕೆ ದಾರಿದೀಪಗಳಾಗಿರುವ ಇವುಗಳಲ್ಲಿ ಪ್ರಸ್ತುತವಾದ ವಿಷಯಗಳು ಎಲ್ಲ ದೇಶ ಕಾಲಗಳಿಗೂ ಅನ್ವಯಿಸುತ್ತವೆ.

ತಮ್ಮ ಬದುಕಿನುದ್ದಕ್ಕೂ ಸಾಹಿತ್ಯ ಸರಸ್ವತಿಯ ಸೇವಾವ್ರತವನ್ನು ಕೈಗೊಂಡಿರುವ ಡಾ। ಎಚ್.ವಿ.ನರಸಿಂಹಮೂರ್ತಿಯವರು 'ಧಾರ್ಮಿಕ ಸುಭಾಷಿತಗಳು' ಹೆಸರಿನ ಈ ಪುಸ್ತಕದಲ್ಲಿ ಕೇವಲ ಧರ್ಮಕ್ಕೆ ಸಂಬಂಧಿಸಿದ ಸುಭಾಷಿತಗಳನ್ನು ಮಾತ್ರವಲ್ಲ, ಸ್ನೇಹ-ವಿಶ್ವಾಸ, ನಯ-ವಿನಯ, ದಾನ-ದೀಕ್ಷೆ, ಸಹನೆ-ಕರುಣೆ, ಆರೋಗ್ಯ-ಅಭ್ಯುದಯ ಮುಂತಾದ ಅನೇಕ ಸಂಗತಿಗಳಿಗೆ ಸಂಬಂಧಿಸಿದ ಆರು ನೂರಕ್ಕೂ ಹೆಚ್ಚು ಸುಭಾಷಿತಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಜೀವನ ಮೌಲ್ಯಗಳ ಕೈಗನ್ನಡಿಯಂತಿರುವ ಈ ಗ್ರಂಥ ಇಂದಿನ ಯುವ ಜನಾಂಗಕ್ಕೆ ತೀರಾ ಪ್ರಸ್ತುತವಾದ ಜೀವನ ಸಂದೇಶದ ಸಾರಸರ್ವಸ್ವವಾಗಿದೆ. ಸರಳ ಕನ್ನಡ ಅನುವಾದದೊಂದಿಗೆ ಪ್ರಕಟಿಸಲಾದ ಈ ಕೃತಿ ಸಾಮಾನ್ಯ ಓದುಗರನ್ನು ಆಕರ್ಷಿಸಿ ಮುದ ನೀಡುತ್ತದೆ. ವಾಚಕ ಪ್ರಪಂಚಕ್ಕೆ ಇಂತಹ ಅನೇಕ ಮೌಲ್ಯಯುತ ಪುಸ್ತಕಗಳನ್ನು ನೀಡಿರುವ ವಿದ್ವಾಂಸರಾದ ಡಾ। ಎಚ್.ವಿ ನರಸಿಂಹಮೂರ್ತಿಯವರು ತನ್ಮೂಲಕ ದೇವಋಣ ಮತ್ತು ಋಷಿ ಋಣಗಳನ್ನು ತೀರಿಸಿದ್ದಾರೆ. ನಿರಂತರ ಕ್ರಿಯಾಶೀಲರಾದ ಡಾ। ಮೂರ್ತಿಯವರಿಂದ ಇನ್ನೂ ಅನೇಕ ಬೋಧಪ್ರದ ಕೃತಿಗಳು ಮೂಡಿಬರಲೆಂದು ಹಾರೈಕೆ ನಮ್ಮೆಲ್ಲರದು.


**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)**, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ-2.



ನಮ್ಮ ಸಂಘದ ಆಶ್ರಯದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆಯು**

ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ ತಾ.30-04-2017ನೇ ಆದಿತ್ಯವಾರ ನೆರವೇರಲಿದೆ.

ಆ ಪ್ರಯುಕ್ತ ಅದೇ ದಿನ ಬೆಳಿಗ್ಗೆ **ಸಾಮೂಹಿಕ ಉಪನಯನ**ವು ನಡೆಯಲಿದೆ.

ಸರ್ವರಿಗೂ ಆದರದ ಸ್ವಾಗತ :

- ಆಡಳಿತ ಮಂಡಳಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.25-4-2017ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್/ಕಾರ್ಯದರ್ಶಿಯವರಿಗೆ (0820-2520754) ತಿಳಿಸಲು ವಿನಂತಿಸಲಾಗಿದೆ.

